**ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ**

**ನ್ಯಾಯಾಲಯದಲ್ಲಿ, ಸಿದ್ದಾಪುರ .**

**ಉಪಸ್ಥಿತರುಃ**

**ಶ್ರೀ ತಿಮ್ಮಯ್ಯ ಜಿ.**

**ಬಿ.ಎ. ಎಲ್.ಎಲ್.ಬಿ.**

ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,

ಸಿದ್ದಾಪುರ

**ದಿನಾಂಕಃ 17 ನೇ ಅಗಸ್ಟ 2022 ನೇ ಇಸವಿ**

**ಅಸಲು ದಾವೆ ಸಂಖ್ಯೆ 67/2022**

**ವಾದಿಯರುಃ ಮಹಾದೇವ ಬಿನ್ ಮಂಜಯ್ಯ ಗೌಡ**

**(ಪ್ರತಿನಿಧಿಸುವವರು ಶ್ರೀ..ಆರ್ ಎಸ್ ಹೆಚ್ . ನ್ಯಾಯವಾದಿಗಳು)**

**ಃ ವಿರುದ್ಧ ಃ**

**ಪ್ರತಿವಾದಿಯರುಃ ನಾರಾಯಣ ಮಹಾದೇವ ನಾಯ್ಕ**

**(ಪ್ರತಿನಿಧಿಸುವವರು ಶ್ರೀ ಎನ್.ಡಿ.ಎನ್ ನ್ಯಾಯವಾದಿಗಳು)**

**ಅರ್ಜಿದಾರಃ ಮಹಾದೇವ ಬಿನ್ ಮಂಜಯ್ಯ ಗೌಡ**

**ಃ ವಿರುದ್ಧ ಃ**

**ಎದುರುದಾರಃ ನಾರಾಯಣ ಮಹಾದೇವ ನಾಯ್ಕ**

**ಃ ಮಧ್ಯಂತರ ಅರ್ಜಿ ಸಂಖ್ಯೆ II ರ ಮೇಲಿನ ಆದೇಶ ಃ**

1 ನೇ ವಾದಿಯು, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ಅರ್ಜಿ ಸಂಖ್ಯೆ II ನ್ನು ಸಲ್ಲಿಸಿ, ದಾವ

ಷೆಡ್ಯೂಲ್ ದಾವಾ ಆಸ್ತಿ ಬೆಟ್ಟ ಸ್ಥಳದಲ್ಲಿ ವಿವಾದವಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ರಲ್ಲಿ ನಮೂದಿಸಿರುವ ದಾವಾ ಸ್ವತ್ತಿನ ಸ್ಥಳ ಅಂದರೆ ,ದಾವಾ ಕಚ್ಚಾ ಹಾತ್ ನಕಾಶೆಯಲ್ಲಿ x ಎಂಬ ಗುರುತಿನಿಂದ ತೋರಿಸಿರುವ ವಿವಾದಿತ ಸ್ಥಳ ಹಾಗೂ ದಾವಾ ಸ್ವತ್ತಿನಲ್ಲಿರುವ ಅಂದರೆ , ದಾವಾ ಕಚ್ಚಾ ಹಾತ್ ನಕಾಶೆಯಲ್ಲಿ ತೋರಿಸಿರುವ ರಸ್ತೆಯ ಜಾಗವನ್ನು ಹೊರತುಪಡಿಸಿ ಅಂದರೆ ಸಾಮೂಹಿಕ ವೈವಾಟಿನ ಜಮೀನುದಾರರ ಓಡಾಡುವ ಹಾಗೂ ಕೃಷಿ ಉತ್ಪನ್ನ ಮತ್ತು ಸಲಕರಣೆಗಳನ್ನು ಸಾಗಿಸುವ ದಾರಿಗೆ ತೊಂದರೆಯಾಗದಂತೆ ಉಳಿದ ಬೆಟ್ಟ ಸ್ಥಳದಲ್ಲಿ ಅರಣ್ಯ ಸಸಿಗಳನ್ನು ನೆಡಲು ಯಾವುದೇ ರೀತಿಯ ಅಡ್ಡಿ ಆತಂಕ ಪಡಿಸದಂತೆ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶದ ಮೂಲಕ ನಿರ್ಬಂಧಿಸುವಂತೆ, ಆದೇಶವಾಗಲು ಪ್ರಾರ್ಥಿಸಿರುತ್ತಾರೆ.

2. **<u>ಮಧ್ಯಂತರ ಅರ್ಜಿಯ ಷೆಡ್ಯೂಲ್‌ನಲ್ಲಿನ ಸ್ವತ್ತಿನ ವರ್ಣನೆಃ</u>**

ಸಿದ್ದಾಪುರ ತಾಲೂಕು ಕೊಂಡ್ಲಿ ಹೋಬಳಿ ಕುಣಜಿ ಗ್ರಾಮದ ಸರಕಾರಿ ಬೆಟ್ಟ ಸರ್ವೆ ನಂ 80 ಹಿಸ್ಸಾ ಒಟ್ಟು ಕ್ಷೇತ್ರ 31-2-0 ಪೈಕಿ 29-20-0 ಕ್ಷೇತ್ರ ಚತುರ್ಗಡಿ , ಪೂರ್ವಕ್ಕೆಃ ತರಿ ಜಮೀನುಗಳು (ಸ ನಂ 68,60,73,74 ರಿಂದ 78 ಹಾಗೂ ಸ. ನಂ 16) ಪಶ್ಚಿಮಕ್ಕೆಃ ಫಾರೆಸ್ಟ ಹಾಗೂ ಕೋಲಸಿರ್ಸಿ ಗ್ರಾಮದ ಗಡಿ ಮತ್ತು ಹಾಗೂ ನಂ 199 , ಉತ್ತರಕ್ಕೆಃ ಸ ನಂ 81 , ಸನಂ 79, ಸ ನಂ 19 , ದಕ್ಷಿಣಕ್ಕೆಃ ಬಿದ್ರಕಾನ ಪಿ ಡಬ್ಲ್ಯೂ ಡಿ ರಸ್ತೆ ಇದು ಲಗ್ತ ಇರಿಸಿದ ಹಾತ್ ನಕಾಶೆಯಲ್ಲಿ ಗುರುತಿಸಿದಂತೆ ಇರುತ್ತದೆ .

3. 1 ನೇ ವಾದಿಯು ಸದರಿ ಅರ್ಜಿಯೊಂದಿಗಿನ ಶಪಥ ಪತ್ರದಲ್ಲಿ ಪ್ರತಿಪಾದಿಸುವುದೇನೆಂದರೆ,ದಾವಾಸ್ತಿಯ ಸಂಪೂರ್ಣ ಮಾಹಿತಿ ಇದ್ದು, ತಾನು ಈ

ಪ್ರಮಾಣಪತ್ರವನ್ನು ಉಳಿದ ವಾದಿಯರ ಪರವಾಗಿಯೂ ಮಾಡುತ್ತಿದ್ದೇನೆ. ಮುಂದುವರೆದು, ತಾವು ದಾವಾಸ್ತಿ ಬೆಟ್ಟವನ್ನು ವ್ಯವಸ್ಥಿತವಾಗಿ ಕಾಯ್ದುಕೊಂಡು ಬರುವುದಕ್ಕಾಗಿ 4 ರಿಂದ 5 ಸಾವಿರ ಬೆಲೆಬಾಳುವ ಅರಣ್ಯ ಸಸಿಗಳನ್ನು ಸಂಗ್ರಹಿಸಿ ದಾವಾಸ್ತಿಯ ಬಹುತೇಕ ಭಾಗದಲ್ಲಿ ಅಗಳ ಹೊಡೆದು ಸಸಿ ನೆಡುವ ಸಂಬಂಧಪಟ್ಟಂತೆ ತಯಾರಿ ನಡೆಸುತ್ತಿರುವಾಗ ಪ್ರತಿವಾದಿಯರು ದಾವಾಸ್ತಿ ಬೆಟ್ಟವನ್ನು ಅಕ್ರಮವಾಗಿ ಅತಿಕ್ರಮಿಸಬೇಕೆಂದ ದುರುದ್ದೇಶದಿಂದ ನ್ಯಾಯಾಲಯದಲ್ಲಿ ದಿಃ 11-07-2022 ರಂದು ಕೇವಿಯಟ್ ಅರ್ಜಿಯನ್ನು ವಾದಿಯರ ವಿರುದ್ಧ ದಾಖಲಿಸಿ ದಿಃ12-07-2022 ರಂದು ದಾವಾಸ್ತಿ ಬೆಟ್ಟದಲ್ಲಿ ಅಂದರೆ ದಾವಾ ಕಚ್ಚಾ ಹಾತ್ ನಕಾಶೆಯಲ್ಲಿ x ಎಂದು ಕೇಸರಿ ಬಣ್ಣದಲ್ಲಿ ಗುರುತಿಸಿದ ಸ್ಥಳಗಳಲ್ಲಿ ಪ್ಲಾಸ್ಟೀಕ್ ಟಾರ್ಪೆಲ್ ಸಿಮೆಂಟ್ ಶೀಟ್ ಝುಂಕ್ ಶೀಟ್ ಹೋಲೋಬ್ಲಾಕ್ ಗಳನ್ನು ಉಪಯೋಗಿಸಿ ತಾತ್ಕಾಲಿಕ ಶೆಡ್ ಗಳನ್ನು ಬಲಾತ್ಕಾರವಾಗಿ ಕಟ್ಟಿರುತ್ತಾರೆ . ತಮಗೆ ದಾವಾಸ್ತಿ ಬೆಟ್ಟವನ್ನು ಈ ಹಿಂದಿನಂತೆ ಉಪಯೋಗಿಸಿಕೊಂಡು ಹೋಗಲು ಬಿಡುವುದಿಲ್ಲವೆಂದು ಧಮ್ಕಿ ಸಹ ಹಾಕಿರುತ್ತಾರೆ. ಪ್ರತಿವಾದಿಯರು ಮುಂದುವರೆದು, ದಾವಾಸ್ತಿ ಬೆಟ್ಟದಲ್ಲಿ ಹೊಸದಾಗಿ ನಮಗೆ ಅರಣ್ಯ ಗಿಡಗಳನ್ನು ಹಚ್ಚಲು ಬಿಡುವುದಿಲ್ಲವೆಂತಲೂ ಸಹ ಧಮ್ಕಿ ಹಾಕಿರುತ್ತಾರೆ .

ತಾವು ಹೇರಳ ಹಣ ಖರ್ಚು ಮಾಡಿ ದಾವಾಸ್ತಿ ಬೆಟ್ಟದಲ್ಲಿ ಅರಣ್ಯ ಸಸಿಗಳನ್ನು ನೆಡುವ ಸಂಬಂಧಪಟ್ಟಂತೆ ಸಾಕಷ್ಟು ಪೂರ್ವ ತಯಾರಿ ನಡೆಸಿಕೊಂಡು ಈಗಾಗಲೇ ಕೆಲಸ ಪ್ರಾರಂಭಿಸಿದ್ದು ಇರುತ್ತದೆ. ಅರಣ್ಯ ಸಸಿಗಳನ್ನು ಮಳೆಗಾಲದಲ್ಲಿಯೇ ಅತಿ ತುರ್ತಾಗಿ ನೆಡುವುದು ತೀರಾ ಅವಶ್ಯಕತೆ ಇರುತ್ತದೆ . ಒಂದೊಮ್ಮೆ ಪ್ರತಿವಾದಿಯರು ತಮಗೆ ದಾವಾಸ್ತಿ ಬೆಟ್ಟದ ಖುಲ್ಲಾ ಸ್ಥಳದಲ್ಲಿ ಅರಣ್ಯ ಸಸಿಗಳನ್ನು ನೆಡಲು ಆತಂಕ ಪಡಿಸಿದಲ್ಲಿ ಸಕಾಲದಲ್ಲಿ ಸಸಿಗಳನ್ನು ನೆಡದೆ ಅಪಾರ ಪ್ರಮಾಣದ ಸಸಿಗಳು ಹಾಳಾಗುವುದಲ್ಲದೇ ಇದರಿಂದ ಪರಿಸರ ಅಸಮತೋಲನ ಉಂಟಾಗುವುದು

ನಿಶ್ಚಿತವಿರುತ್ತದೆ . ಇದರಿಂದ ತುಂಬಲಾರದ ನಷ್ಟ ಸಂಭವಿಸುವುದು .

ಪ್ರತಿವಾದಿಯರಿಗೆ ದಾವಾಸ್ತಿಯ ಮೇಲೆ ಏನೊಂದು ಹಕ್ಕು ಅಥವಾ ವೈವಾಟಿ ಇರುವುದಿಲ್ಲ . ತಾನು ದಾವಾಸ್ತಿ ಬೆಟ್ಟವನ್ನು ವ್ಯವಸ್ಥಿತವಾಗಿ ಕಾಯ್ದುಕೊಂಡು ಬರುವ ಸಂಬಂಧಪಟ್ಟಂತೆ ಹೇರಳ ಮಾನವ ಶ್ರಮ ವಿನಿಯೋಗಿಸಿದ್ದು ಇರುತ್ತದೆ . ಕಾರಣ ಅನಿವಾರ್ಯವಾಗಿ ತಾವು ದಾವೆಯಲ್ಲಿ ಕೇಳಿದಂತೆ ಪರಿಹಾರ ಕೋರಿ ಈ ದಾವಾ ದಾಖಲ್ಪಡಿಸಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವ ಅನಿವಾರ್ಯ ಪ್ರಸಂಗ ಉಂಟಾಗಿರುತ್ತದೆ . ಪ್ರತಿವಾದಿಯರಿಗೆ ದಾವಾಸ್ತಿಯ ಮೇಲೆ ವೈವಾಟಿ ಅಥವಾ ಹಕ್ಕು ಇಲ್ಲದಾಗ್ಯೂ ಈ ದಾವೆಯಲ್ಲಿ ತಿಳಿಸಿದಂತೆ ತೊಂದರೆ ನೀಡುತ್ತಿದ್ದು ಪ್ರತಿವಾದಿಯರು ಗೂಂಡಾ ವ್ಯಕ್ತಿಗಳ ಪ್ರಭಾವ ಹೊಂದಿದವರು ಇರುವುದರಿಂದ ಮಾನ್ಯ ನ್ಯಾಯಾಲಯದ ಸೂಕ್ತ ಆದೇಶವಿಲ್ಲದೆ ಪ್ರತಿವಾದಿಯರ ಅಪಕೃತ್ಯವನ್ನು ತಡೆಯುವುದು ವಾದಿಯರಾದ ತಮಗೆ ಕಷ್ಟವಾಗಿರುತ್ತದೆ. ಕಾರಣ ಅವರ ಪ್ರತಿವಾದಿಯ ಮೇಲೆ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಮಾಡಬೇಕಾಗಿ ವಿನಂತಿಸಿಕೊಳ್ಳುತ್ತಾರೆ.

4. ಸದರಿ ಅರ್ಜಿಗೆ ಪ್ರತಿಯಾಗಿ, ಪ್ರತಿವಾದಿ ಪರ ನ್ಯಾಯವಾದಿಗಳು ತಕರಾರನ್ನು ಸಲ್ಲಿಸಿ ಅರ್ಜಿಯಲ್ಲಿನ ಅಂಶಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು, ಪ್ರತಿವಾದಿಯು ವಾದಿಯು ದಾವೆಯ ಜೊತೆಯಲ್ಲಿ ಆದೇಶ XXXIX ನಿಯಮ 2 ರ ಅಡಿಯಲ್ಲಿ ಅರ್ಜಿಯ ಜೊತೆಯಲ್ಲಿ ಸಲ್ಲಿಸಿರುವ ಪ್ರಮಾಣಪತ್ರದಲ್ಲಿರುವ ಎಲ್ಲಾ ಪ್ಯಾರಾಗಳಲ್ಲಿರುವ ವಿಷಯಗಳನ್ನು ಪ್ರತಿವಾದಿಯರು ಅಲ್ಲಗಳೆದಿರುತ್ತಾರೆ .

ಮುಂದುವರೆದು, ಪ್ರತಿವಾದಿಯರು ಹೇಳುವುದೇನೆಂದರೆ , ವಾದಿಯರ ದಾವೆ ನ್ಯಾಯವಾದುದಲ್ಲ ಹಾಗೂ ಈ ಪ್ರತಿವಾದಿಯರ ವಿರುದ್ಧ ನಡೆಯತಕ್ಕದ್ದಲ್ಲ.

ದಾವಾಸ್ತಿಗಳ ವರ್ಣನೆ ಸರಿ ಇರುವುದಿಲ್ಲ. ದಾವಾ ವಾದಪತ್ರದ ಹಾಜರುಪಡಿಸಿದ ಚತುರ್ಗಡಿ ವಸ್ತುಸ್ಥಿತಿಯಂತೆ ಇರುವುದಿಲ್ಲ.

ಮುಂದುವರೆದು, ಪ್ರತಿವಾದಿಯರು ಹೇಳುವುದೇನೆಂದರೆ ವಾದಿಯರು ತಮ್ಮ ಪ್ರಮಾಣ ಪತ್ರದಲ್ಲಿ ಕಾಣಿಸಿದಂತೆ ದಾವಾಸ್ತಿಯ ಮೇಲೆ ಈ ಪ್ರತಿವಾದಿಯರಿಗೆ ಏನೊಂದು ಹಕ್ಕು ಸಂಬಂಧ ಅಥವಾ ಸ್ವಾಮಿತ್ವ ಇರುವುದಿಲ್ಲ ಎನ್ನುವ ಸಂಗತಿ ಸತ್ಯಕ್ಕೆ ದೂರವಾಗಿದೆ. ವಾದಿಯರು ವಸ್ತುಸ್ಥಿತಿಯನ್ನು ಪೂರ್ತಿ ಮರೆಮಾಚಿ ಹೊಸದಾಗಿ ಪುರಾವೆಗಳನ್ನು ಸೃಷ್ಟಿಸಿಕೊಳ್ಳಬೇಕೆನ್ನುವ ದುರುದ್ದೇಶದಿಂದ ದಾವಾಸ್ತಿ ಬೆಟ್ಟದಲ್ಲಿ ಸಸಿ ನೆಡಲು ಪ್ರತಿವಾದಿಯರು ಆತಂಕಪಡಿಸಿದರೆಂದು ಕಾಣಿಸಿದ್ದು ಹಾಸ್ಯಾಸ್ಪದ ಸಂಗತಿಯಾಗಿದೆ. ವಾದಿಯರು ದಾವಾಸ್ತಿ ಹೊಸದಾಗಿ ಅಗಳೆ ಹೊಡೆದು ಗಡಿ ಗುರ್ತಿಸಲು ಹೋಗುವ ನೆಪದಲ್ಲಿ ದಾವಾಸ್ತಿಗೆ ಜೆ ಸಿ ಬಿ ತಂದು ದಾವಾಸ್ತಿಯಲ್ಲಿ ಬಹುಕಾಲದಿಂದ ವಾಸ ಮಾಡುತ್ತಾ ಇದ್ದ ಪ್ರತಿವಾದಿಯರ ಮನೆಗಳನ್ನು ನೆಲಸಮ ಮಾಡಲು ಪ್ರಾರಂಭಿಸಿದಾಗ, ಗ್ರಾಮದ ನೂರಾರು ಜನರು ಇದನ್ನು ಪ್ರತಿಭಟಿಸಿ ಪೋಲಿಸರಿಗೆ ದೂರು ಕೊಟ್ಟು, ಪೋಲಿಸರು ಸ್ಥಳಕ್ಕೆ ಬಂದು ಕೆಲಸವನ್ನು ಸ್ಥಗಿತಗೊಳಿಸಿ ಜೆ.ಸಿ.ಬಿಯನ್ನು ಸ್ಟೇಶನ್ ಗೆ ಒಯ್ದಿರುತ್ತಾರೆ. ಈ ರೀತಿ ಬಹುಕಾಲದಿಂದ ಶಾಂತಿ ರೀತಿಯಿಂದ ವೈವಾಟ ಮಾಡಿ ಬರುತ್ತಿದ್ದ ಪ್ರತಿವಾದಿಯರಿಗೆ ವಾದಿಯರು ತೊಂದರೆ ಕೊಟ್ಟು ಊರಿನಲ್ಲಿ ಅಶಾಂತಿಯ ವಾತಾವರಣವನ್ನು ಸೃಷ್ಟಿಸಿ ನ್ಯಾಯಾಲಯದಲ್ಲಿ ಸುಳ್ಳು ದಾವೆಯನ್ನು ದಾಖಲಿಸಿರುತ್ತಾರೆ .

ಸೊಪ್ಪಿನ ಬೆಟ್ಟದಲ್ಲಿ ಯಾರು ಸೊಪ್ಪಿನ ಗಿಡವನ್ನು ನೆಟ್ಟು ಬೆಳೆಸುವುದಿಲ್ಲ. ನೈಸರ್ಗಿಕವಾಗಿ ಹುಟ್ಟುವ ಗಿಡಗಳನ್ನು ಮಾತ್ರ ರಕ್ಷಣೆ ಮಾಡಿಕೊಂಡು ಅದರ ಸೊಪ್ಪನ್ನು ಮಾತ್ರ ತೋಟಕ್ಕೆ ಉಪಯೋಗಿಸುತ್ತಾರೆ . ಅಲ್ಲದೇ ತೋಟಕ್ಕೆ ಮಣ್ಣಿನ ಅವಶ್ಯಕತೆ ಇರುವಾಗ ಬೆಟ್ಟದಲ್ಲಿ ಇರುವ ಮಣ್ಣನ್ನು ತೆಗೆದು ತೋಟಕ್ಕೆ ಹಾಕುತ್ತಾರೆ.

ವಾದಿಯರು ದಾವಾ ಸ್ಥಳದಲ್ಲಿ ಈಗ ಸಸಿಗಳನ್ನು ನೆಟ್ಟು ಪುರಾವೆಯನ್ನು ಸೃಷ್ಟಿ ಮಾಡಿಕೊಳ್ಳಲು ಆ ಬಗ್ಗೆ ನ್ಯಾಯಾಲಯದಿಂದ ಆದೇಶ ಪಡೆಯಲು ಸದ್ರಿ ಅರ್ಜಿ ಸಲ್ಲಿಸಿದ್ದು ಇದೆ. ದಾವಾ ಬೆಟ್ಟವು ಕಲ್ಲು ಗೊಜ್ಜು ಮಣ್ಣಿನಿಂದ ಕೂಡಿದ್ದು , ಅಲ್ಲಲ್ಲಿ ರೈತರು ರಕ್ಷಣೆ ಮಾಡಿ ಬಂದ ಕೆಲವು ಶ್ರೀಗಂಧದ ಗಿಡಗಳು ಇವೆ . ವಾದಿಯರಿಗೆ ಸಸಿ ನೆಡಲು ಅವಕಾಶ ಮಾಡಿಕೊಟ್ಟರೆ ಈಗಾಗಲೇ ಬೇರೆ ಬೇರೆ ರೀತಿಯಲ್ಲಿ ದಾವಾ ಬೆಟ್ಟವನ್ನು ವೈವಾಟಿ ಮಾಡಿ ಬರುತ್ತಿರುವ ರೈತರಿಗೆ ತುಂಬಲಾರದ ನಷ್ಟ ಹಾಗೂ ಅನ್ಯಾಯ ಸಂಭವಿಸುತ್ತದೆ . ಕೇವಲ ದಾಖಲೆಯ ಆಧಾರದ ಮೇಲೆ ವಾದಿಯರು ವಸ್ತುಸ್ಥಿತಿಯನ್ನು ಮರೆಮಾಚಿ ನ್ಯಾಯಾಲಯದಲ್ಲಿ ದಾವೆ ದಾಖಲಿಸಿ ತಮಗೆ ಅನುಕೂಲವಾಗುವ ಆದೇಶವನ್ನು ಪಡೆಯಲು ಹೊರಟಿರುತ್ತಾರೆ. ಸದ್ರಿ ದಾವಾ ಬೆಟ್ಟಕ್ಕೆ ಸರಕಾರವೇ ಮಾಲೀಕರಾಗಿದ್ದು , ಅಲ್ಲಿ ಬೆಳೆಯುವ ಸೊಪ್ಪು , ಮಣ್ಣನ್ನು ತೆಗೆದುಕೊಳ್ಳುವ ವಿಶಿಷ್ಟ ಹಕ್ಕು ಮಾತ್ರ ರೈತರಿಗೆ ಇದ್ದು , ಅದನ್ನು ಕೂಡಾ ವಾದಿಯರು ಉಪಯೋಗಿಸುತ್ತಾ ಬಂದಿದ್ದು ಇರುವುದಿಲ್ಲ. ಆದ್ದರಿಂದ, ವಾದಿಯರ ಸದರಿ ಮಧ್ಯಂತರ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ.

5. ಸದರಿ ಈ ಮೇಲಿನ ಅರ್ಜಿ ಮತ್ತು ತಕರಾರಿನಲ್ಲಿನ ಅಂಶವನ್ನು ಗಮನಿಸಿದಾಗ ಸದರಿ ಮಧ್ಯಂತರ ಅರ್ಜಿಯನ್ನು ತೀರ್ಮಾನಿಸಲು, ಈ ನ್ಯಾಯಾಲಯಕ್ಕೆ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

1. ವಾದಿಯರು ಮೇಲ್ನೋಟಕ್ಕೆ ರುಜುವಾತು ಆಗುವ ಪ್ರಕರಣ ಹೊಂದಿರುತ್ತಾರೆಯೇ?
2. ಅನುಕೂಲತೆಯ ಒಲವು ವಾದಿಯರ ಪರವಾಗಿ ಇದೆಯೇ?
3. ಸದರಿ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಯರಿಗೆ ತುಂಬಲಾರದ ನಷ್ಟ ಮತ್ತು ಕ್ಷತಿ

ಉಂಟಾಗುವುದೆ?

4. ಏನು ಆದೇಶ?

6. ಉಭಯ ಪಕ್ಷಗಾರರ ಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು.

7. ಸದರಿ ಮಧ್ಯಂತರ ಅರ್ಜಿ, ವಾದಪತ್ರ ಮತ್ತು ಇದಕ್ಕೆ ಪೂರಕವಾಗಿ 1 ನೇ ವಾದಿಯು ಹಾಜರುಪಡಿಸಿರುವ ದಾಖಲೆಗಳು ಹಾಗೂ ಇತರೆ ಸಂಗತಿಗಳನ್ನು ಪರಿಶೀಲಿಸಿ, ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಗಿನಂತೆ ಉತ್ತರಿಸಿದೆ.

ಅಂಶ 1 ರಿಂದ 3:ಸಕರಾತ್ಮಕವಾಗಿ,

ಅಂಶ 4 : ಅಂತಿಮ ಆದೇಶದಂತೆ, ಈ ಕೆಳಗಿನ ಕಾರಣಗಳಿಗಾಗಿ,

ಃಃ **ಕಾ ರ ಣ ಗ ಳು** ಃಃ

8 .**ಅಂಶ 1 ರಿಂದ 3** ಃ ಸದರಿ ಈ ಮೂರು ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಪುನರಾವರ್ತನೆ ತಪ್ಪಿಸುವ ಸಲುವಾಗಿ, ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ಸದರಿ ಮಧ್ಯಂತರ ಅರ್ಜಿಯಲ್ಲಿನ ಹಾಗೂ ಲಿಖಿತ ತಕರಾರಿನ ಅಂಶಗಳನ್ನು ಸದರಿ ಆದೇಶದ ಆರಂಭದಲ್ಲೇ ವಿವರಿಸಲ್ಪಟ್ಟಿರುವುದರಿಂದ, ಸದರಿ ಅರ್ಜಿಯಲ್ಲಿನ ಹಾಗೂ ತಕರಾರಿನಲ್ಲಿನ ಅಂಶಗಳ ಪುನರಾವರ್ತನೆ ತಪ್ಪಿಸುವ ಸಲುವಾಗಿ ಮತ್ತೊಮ್ಮೆ ಈ ಸಂದರ್ಭದಲ್ಲಿ ಸದರಿ ಅಂಶಗಳನ್ನು ಪುನರ್ ಪ್ರಸ್ತಾಪಿಸಿರುವುದಿಲ್ಲ.

9. ವಾದಿಯರು, ಸದರಿ ದಾವೆಯನ್ನು ಪ್ರತಿವಾದಿಯ ವಿರುದ್ದ, ದಾವೆಯ

ಷೆಡ್ಯೂಲ್ ನಲ್ಲಿ ತೋರಿಸಿರುವ ಆಸ್ತಿಯಲ್ಲಿ ತಮ್ಮ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆ ನೀಡದಂತೆ ಶಾಶ್ವತ ನಿರ್ಬಂಧಕಾಜ್ಞೆ ಆದೇಶದ ಪರಿಹಾರ ಕೋರಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆ ಚಾಲ್ತಿಯಲ್ಲಿದ್ದ ಸಂದರ್ಭದಲ್ಲಿ, ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ XXXIX ನಿಯಮ 1 ಮತ್ತು 2 ರಂತೆ ಸದರಿ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ಸಲ್ಲಿಸಿ, ದಾವಾ ಷೆಡ್ಯೂಲ್ ಆಸ್ತಿಯಲ್ಲಿ ಅಂದರೆ, ದಾವಾ ಆಸ್ತಿ ಬೆಟ್ಟ ಸ್ಥಳದಲ್ಲಿ ಅರಣ್ಯ ಸಸಿಗಳನ್ನು ನೆಡಲು ಪ್ರತಿವಾದಿಯರು ಯಾವುದೇ ರೀತಿ ಅಡ್ಡಿ ಆತಂಕ ಪಡಿಸದಂತೆ ಸದರಿ ದಾವೆ ಇತ್ಯರ್ಥವಾಗುವವರೆಗೆ ತಾತ್ಕಾಲಿಕ ನಿರ್ಬಂಧ ಕಾಯ್ದೆ ಆದೇಶ ಮಾಡುವಂತೆ ಕೋರಿರುತ್ತಾರೆ .

10. ವಾದಿಯು ಸದರಿ ಅರ್ಜಿಯಲ್ಲಿನ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ದಾವಾ ಸ್ವತ್ತು ಅಂದರೆ, ತಾವು ದಾವಾಸ್ತಿ ಬೆಟ್ಟವನ್ನು ವ್ಯವಸ್ಥಿತವಾಗಿ ಕಾಯ್ದುಕೊಂಡು ಬರುವುದಕ್ಕಾಗಿ 4 ರಿಂದ 5 ಸಾವಿರ ಬೆಲೆಬಾಳುವ ಅರಣ್ಯ ಸಸಿಗಳನ್ನು ಸಂಗ್ರಹಿಸಿ ದಾವಾಸ್ತಿಯ ಬಹುತೇಕ ಭಾಗದಲ್ಲಿ ಅಗಳ ಹೊಡೆದು ಸಸಿ ನೆಡುವ ಸಂಬಂಧಪಟ್ಟಂತೆ ತಯಾರಿ ನಡೆಸುತ್ತಿರುವಾಗ , ಪ್ರತಿವಾದಿಯರು ದಾವಾಸ್ತಿ ಬೆಟ್ಟವನ್ನು ಅಕ್ರಮವಾಗಿ ಅತಿಕ್ರಮಿಸಬೇಕೆಂಬ ದುರುದ್ದೇಶದಿಂದ ನ್ಯಾಯಾಲಯದಲ್ಲಿ ದಿಃ 11-07-2022 ರಂದು ಕೇವಿಯಟ್ ಅರ್ಜಿಯನ್ನು ವಾದಿಯರ ವಿರುದ್ಧ ದಾಖಲಿಸಿ ದಿಃ12-07-2022 ರಂದು ದಾವಾಸ್ತಿ ಬೆಟ್ಟದಲ್ಲಿ ಅಂದರೆ, ದಾವಾ ಕಚ್ಚಾ ಹಾತ್ ನಕಾಶೆಯಲ್ಲಿ x ಎಂದು ಕೇಸರಿ ಬಣ್ಣದಲ್ಲಿ ಗುರುತಿಸಿದ ಸ್ಥಳಗಳಲ್ಲಿ ಪ್ಲಾಸ್ಟೀಕ್ ಟಾರ್ಪೆಲ್ ಸಿಮೆಂಟ್ ಶೀಟ್ ಝುಂಕ್ ಶೀಟ್ ಹೋಲೋಬ್ಲಾಕ್ ಗಳನ್ನು ಉಪಯೋಗಿಸಿ ತಾತ್ಕಾಲಿಕ ಶೆಡ್ ಗಳನ್ನು ಬಲಾತ್ಕಾರವಾಗಿ ಕಟ್ಟಿರುತ್ತಾರೆ . ತಮಗೆ ದಾವಾಸ್ತಿ ಬೆಟ್ಟವನ್ನು ಈ ಹಿಂದಿನಂತೆ ಉಪಯೋಗಿಸಿಕೊಂಡು ಹೋಗಲು ಬಿಡುವುದಿಲ್ಲವೆಂದು ಧಮ್ಕಿ ಸಹ ಹಾಕಿರುತ್ತಾರೆ. ಪ್ರತಿವಾದಿಯರು ಮುಂದುವರೆದು,

ದಾವಾಸ್ತಿ ಬೆಟ್ಟದಲ್ಲಿ ಹೊಸದಾಗಿ ನಮಗೆ ಅರಣ್ಯ ಗಿಡಗಳನ್ನು ಹಚ್ಚಲು ಬಿಡುವುದಿಲ್ಲವೆಂತಲೂ ಸಹ ಧಮ್ಕಿ ಹಾಕಿರುತ್ತಾರೆ. ತಾವು ಹೇರಳ ಹಣ ಖರ್ಚು ಮಾಡಿ ದಾವಾಸ್ತಿ ಬೆಟ್ಟದಲ್ಲಿ ಅರಣ್ಯ ಸಸಿಗಳನ್ನು ನೆಡುವ ಸಂಬಂಧಪಟ್ಟಂತೆ ಸಾಕಷ್ಟು ಪೂರ್ವ ತಯಾರಿ ನಡೆಸಿಕೊಂಡು ಈಗಾಗಲೇ ಕೆಲಸ ಪ್ರಾರಂಭಿಸಿದ್ದು, ಇರುತ್ತದೆ. ಅರಣ್ಯ ಸಸಿಗಳನ್ನು ಮಳೆಗಾಲದಲ್ಲಿಯೇ ಅತಿ ತುರ್ತಾಗಿ ನೆಡುವುದು ತೀರಾ ಅವಶ್ಯಕತೆ ಇರುತ್ತದೆ. ಒಂದೊಮ್ಮೆ ಪ್ರತಿವಾದಿಯರು ತಮಗೆ ದಾವಾಸ್ತಿ ಬೆಟ್ಟದ ಖುಲ್ಲಾ ಸ್ಥಳದಲ್ಲಿ ಅರಣ್ಯ ಸಸಿಗಳನ್ನು ನೆಡಲು ಆತಂಕಪಡಿಸಿದಲ್ಲಿ ಸಕಾಲದಲ್ಲಿ ಸಸಿಗಳನ್ನು ನೆಡದೆ ಅಪಾರ ಪ್ರಮಾಣದ ಸಸಿಗಳು ಹಾಳಾಗುವುದಲ್ಲದೇ, ಇದರಿಂದ ಪರಿಸರ ಅಸಮತೋಲನ ಉಂಟಾಗುವುದು ನಿಶ್ಚಿತವಿರುತ್ತದೆ. ಇದರಿಂದ ತುಂಬಲಾರದ ನಷ್ಟ ಸಂಭವವಿರುತ್ತದೆಂದು ಪ್ರತಿಪಾದಿಸುತ್ತಾ ದಾವಾ ಸ್ವತ್ತು ಕುಣಜಿ ಗ್ರಾಮದ ಸ ನಂ 80 ಸರ್ಕಾರಿ ಬೆಟ್ಟ ಆಗಿರುತ್ತದೆಂಬುದರ ಸಂಬಂಧ ಹಾಗೂ ಸದರಿ ಬೆಟ್ಟವನ್ನು ಸಾಮೂಹಿಕ ವೈವಾಟನೊಂದಿಗೆ ಉಪಯೋಗಿಸುತ್ತಿರುವ ಭಾಗಾಯತ್ ಸರ್ವೇ ನಂಬರ 85/1 ರಿಂದ 85/6, 78/1, 78/2, 92, 93/1, 93/2, 104/1,104/2,105/1,105/2, 128/1, 128/2 ಮತ್ತು 129 ಉಪಯೋಗಕ್ಕೆ ಬಿಟ್ಟಿರುತ್ತಾರೆಂದು ಸದರಿ ಸರ್ವೇ ನಂಬರುಗಳ ಗಣಕೀಕೃತ ಪಾಣೀಗಳನ್ನು ಹಾಜರುಪಡಿಸಿ, ಅದಕ್ಕೆ ಸಂಬಂಧಿಸಿದ ಇತರೆ ಕಂದಾಯದ ದಾಖಲೆಗಳು ಮತ್ತು ಸ ನಂ 80 ರ ಗ್ರಾಮ ನಕಾಶೆ, ಮತ್ತು ದಾವಾ ಸ್ವತ್ತಿನ ಕೆಲವು ಭಾವಚಿತ್ರಗಳನ್ನು ಹಾಜರುಪಡಿಸಿ ಪ್ರತಿಪಾದಿಸಿರುತ್ತಾರೆ .

11. ಈ ಹಂತದಲ್ಲಿ ವಾದಿಯ ವಾದ ಪತ್ರದಲ್ಲಿನ ಹಾಗೂ ಸದರಿ ಅರ್ಜಿಯಲ್ಲಿನ ಅಂಶಗಳನ್ನು ಪ್ರತಿವಾದಿಗಳು ಸದರಿ ಅರ್ಜಿಗೆ ತಕರಾರನ್ನು ಸಲ್ಲಿಸಿ, ಸಂಪೂರ್ಣವಾಗಿ ಅಲ್ಲಗಳೆಯುತ್ತಾ, ದಾವಾ ಸ್ವತ್ತಿನ 2 ಜನ ಸಾಮೂಹಿಕ ವೈವಾಟುದಾರರ

ಪ್ರಮಾಣಪತ್ರ ಹಾಗೂ ವಾದಿಯು ತಾವು ಕಟ್ಟಿದ ಶೆಡ್ ನ್ನು ಜೆ ಸಿ ಬಿ ಯಿಂದ ಕೆಡವಿದ್ದರಿಂದ, ಅದೇ ಸ್ಥಳದಲ್ಲಿ ಮತ್ತೆ ಶೆಡ್‌ನ್ನು ನಿರ್ಮಾಣ ಮಾಡಿದ ಬಗ್ಗೆ ಛಾಯಾಚಿತ್ರಗಳನ್ನು ಹಾಗೂ ಪ್ರತಿವಾದಿಯರು ತಾವು ಕೋಲಸಿರ್ಸಿ ಗ್ರಾಮ ಪಂಚಾಯಿತಿಯ ಕುಣಜಿ ಗ್ರಾಮದ ಮನೆ ಸಂಖ್ಯೆ 120 ನ್ನು ಹೊಂದಿ ವಾಸವಿರುವ ಬಗ್ಗೆ ದೃಡೀಕರಣ ಪತ್ರ ಮತ್ತು ಕಂದಾಯ ರಸೀದಿಯನ್ನು ಹಾಜರುಪಡಿಸಿ ತಮ್ಮ ವಾದ ಮಂಡಿಸಿರುತ್ತಾರೆ.

12. ಸದರಿ ಈ ಮೇಲಿನ 1 ನೇ ವಾದಿಯು ಹಾಜರುಪಡಿಸಿರುವ ಮಧ್ಯಂತರ ಅರ್ಜಿ ಹಾಗೂ ತಕರಾರಿನಲ್ಲಿನ ಅಂಶಗಳನ್ನು ಹಾಗೂ ಉಭಯಪಕ್ಷಗಾರರು ಹಾಜರುಪಡಿಸಿರುವ ದಾಖಲೆಗಳನ್ನು ಗಮನಿಸಿದಾಗ, ದಾವಾ ಸ್ವತ್ತು ಸರ್ವೇ ನಂ 80 ರ ಸರ್ಕಾರಿ ಬೆಟ್ಟ ಜಾಗದಲ್ಲಿ ವಾದಿ ಮತ್ತು ಪ್ರತಿವಾದಿಯರಿಬ್ಬರೂ ಸಾಮೂಹಿಕ ವೈವಾಟಿನಲ್ಲಿ ಇರುವ ಬಗ್ಗೆ ಪ್ರತಿಪಾದಿಸಿದ್ದು, ಆ ಸಂಬಂಧ ಪೂರಕ ದಾಖಲೆಗಳನ್ನು ಹಾಜರುಪಡಿಸಿ ಸಮರ್ಥಿಸಿಕೊಳ್ಳಲು ಪ್ರಯತ್ನಿಸಿರುತ್ತಾರೆ. ಸದರಿ ಈ ಮೇಲೆ ಚರ್ಚಿಸಿದ ದಾಖಲೆಗಳನ್ನು ಅಂದರೆ , ವಾದಿಯು ಹಾಜರುಪಡಿಸಿರುವ ದಾವಾ ಸ್ವತ್ತು ಕುಣಜಿ ಗ್ರಾಮದ ಸ ನಂ 80 ರ ಸರ್ಕಾರಿ ಬೆಟ್ಟ ಹಾಗೂ ಅದರ ಭಾಗಾಯತದಾರರ ಸರ್ವೇ ನಂಬರಿನ ದಾಖಲೆಗಳನ್ನು ಗಮನಿಸಿದಾಗ, ದಾವಾ ಸ್ವತ್ತು ಸರ್ಕಾರಿ ಬೆಟ್ಟವಾಗಿರುವುದು ಒಪ್ಪಿತವಾದ ಮತ್ತು ಸ್ಪಷ್ಟವಾದ ಅಂಶವಾಗಿದ್ದು , ಸದರಿ ಸ್ಥಳದಲ್ಲಿ ಅಂದರೆ, ವಾದಿ ಮತ್ತು ಪ್ರತಿವಾದಿಗಳು ಶೆಡ್‌ಗಳನ್ನು ಹಾಗೂ ಸದರಿ ಬೆಟ್ಟದ ಸಾಮೂಹಿಕ ವೈವಾಟಿನ ಜಮೀನುದಾರರು ಓಡಾಡುವ ರಸ್ತೆಗಳನ್ನು ಹೊರತುಪಡಿಸಿ , ಉಳಿದ ಬೆಟ್ಟದ ಸ್ಥಳದಲ್ಲಿ ಅರಣ್ಯ ಸಸಿಗಳನ್ನು ನೆಟ್ಟಲ್ಲಿ ಯಾವುದೇ ಪಕ್ಷಗಾರರಿಗೆ ಅಥವಾ ಪ್ರತಿವಾದಿಗಳಿಗೆ ಯಾವುದೇ ನಷ್ಟ ಅಥವಾ ಹಾನಿ ಆಗುವ ಸಂಭವವಿರುವುದಿಲ್ಲ. ಪ್ರತಿಯಾಗಿ ಸರ್ಕಾರಿ ಬೆಟ್ಟ ಪ್ರದೇಶದಲ್ಲಿ ಸಾಮೂಹಿಕ

ವೈವಾಟಿನ ಭಾಗಾಯತ್ ಜಮೀನುದಾರರು ಸದರಿ ಬೆಟ್ಟದಲ್ಲಿ ಸೊಪ್ಪನ್ನು ಬಳಸಿಕೊಳ್ಳಲು ಹಾಗೂ ದನಕರುಗಳನ್ನು ಮೇಯಿಸಲು ಬಳಸಿಕೊಳ್ಳಲು ಅವಕಾಶವಿದ್ದು, ಅದೇ ರೀತಿ ಸದರಿ ಸ್ಥಳದಲ್ಲಿ ಪರಿಸರಕ್ಕೆ ಅನುಕೂಲವಾಗುವಂತೆ ಹಾಗೂ ಇತರೇ ಸಾಮೂಹಿಕ ವೈವಾಟಿನ ಭಾಗಾಯತದಾರರಿಗೆ ತೊಂದರೆಯಾಗದಂತೆ ಅರಣ್ಯದ ಸಸಿಗಳನ್ನು ಸದರಿ ಸರ್ಕಾರಿ ಬೆಟ್ಟದ ಭಾಗಾಯತ್ ಜಮೀನಿನ ಸಾಮೂಹಿಕ ವೈವಾಟುದಾರರು ನೆಡಲು ಅವಕಾಶವಿದ್ದು, ಸದರಿ ಅರಣ್ಯ ಸಸಿಗಳನ್ನು ನೆಡುವುದರಿಂದ ಯಾವುದೇ ಇತರ ಭಾಗಾಯತದಾರರಿಗೆ ನಷ್ಥ ಅಥವಾ ಹಾನಿಯಾಗುವ ಅಂಶ ಕಂಡುಬರುವುದಿಲ್ಲ.

ವಾದಿಯು ತನ್ನ ಪ್ರಮಾಣ ಪತ್ರದಲ್ಲಿ ಸ್ಪಷ್ಟಪಡಿಸಿರುವಂತೆ ಈಗಾಗಲೇ ಸಾಕಷ್ಟು ಅರಣ್ಯ ಸಸಿಗಳನ್ನು ಸದರಿ ಸರ್ಕಾರಿ ಬೆಟ್ಟದ ಸೂಕ್ತ ಪ್ರದೇಶದಲ್ಲಿ ನೆಡಲು ದಾಸ್ತಾನು ಮಾಡಿಕೊಂಡಿದ್ದು, ಸದರಿ ಸಸಿಗಳನ್ನು ಈ ಮಳೆಗಾಲದಲ್ಲಿ ನೆಟ್ಟಲ್ಲಿ ಅವುಗಳು ಹಾಳಾಗುವುದು ತಪ್ಪುತ್ತದೆ ಆದ್ದರಿಂದ, ಸದರಿ ಅರಣ್ಯ ಸಸಿಗಳನ್ನು ನೆಡಲು ಅವಕಾಶ ನೀಡುವಂತೆ ಕೋರಿರುವ ಅಂಶವು ಸೂಕ್ತವಾಗಿದ್ದು, ಸದರಿ ಅರಣ್ಯ ಸಸಿಗಳನ್ನು ನೆಡಲು ಅವಕಾಶ ನೀಡದಿದ್ದಲ್ಲಿ, ಸದರಿ ಸಸಿಗಳು ನಾಶವಾಗಿ ವಾದಿಯರಿಗೆ ತುಂಬಲಾರದ ನಷ್ಟ ಉಂಟಾಗುವ ಸಾಧ್ಯತೆ ಇದೆ . ಆದ್ದರಿಂದ ನ್ಯಾಯಾಲಯವು ಈ ಮೇಲಿನ ಎಲ್ಲಾ ಅಂಶವನ್ನು ಗಮನಿಸಿ, ವಾದಿಯರು ಸದರಿ ಅರ್ಜಿಯಲ್ಲಿನ ಪ್ರಮಾಣಪತ್ರದಲ್ಲಿ ಪ್ರಮಾಣೀಕರಿಸಿರುವಂತೆ ದಾವಾ ಸ್ವತ್ತಿನ ಸ. ನಂ ೮೦ ರ ಸರ್ಕಾರಿ ಬೆಟ್ಟ ಜಾಗದಲ್ಲಿ ವಾದಿಯರು ಮತ್ತು ಪ್ರತಿವಾದಿಯರಿಗೆ ಸೇರಿದ ತಾತ್ಕಾಲಿಕ ಶೆಡ್ ಮತ್ತು ಸದರಿ ಬೆಟ್ಟದ ಇತರ ಸಾಮಾಹಿಕ ವೈವಾಟಿನ ಭಾಗಾಯತದಾರರು ಓಡಾಡುವ ಮತ್ತು ಕೃಷಿ ಸಲಕರಣೆ ಮತ್ತು ಉತ್ಪನ್ನಗಳನ್ನು ಸಾಗಾಟ ಮಾಡುವ ರಸ್ತೆಗಳನ್ನು ಹೊರತುಪಡಿಸಿ, ಇತರೇ ಭಾಗಾಯತದಾರರ ವೈವಾಟಿಗೇ ತೊಂದರೆಯಾಗದಂತೆ ಸದರಿ ಸರ್ಕಾರಿ ಬೆಟ್ಟದ ಸೂಕ್ತ ಸ್ಥಳಗಳಲ್ಲಿ ಅರಣ್ಯ ಸಸಿಗಳನ್ನು

ಪ್ರಾಮಾಣಿಕತೆಯಿಂದ ಮತ್ತು ಇಚ್ಛಾ ಶಕ್ತಿಯಿಂದ ನೆಟ್ಟು, ಅವುಗಳನ್ನು ಪೋಷಿಸಲು ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಅವಕಾಶ ನೀಡುವುದು ಸೂಕ್ತವಾಗಿರುತ್ತದೆ. ಮುಂದುವರೆದು, ವಾದಿ ಮತ್ತು ಪ್ರತಿವಾದಿಗಳು ತಮ್ಮ ವಾದ ಮತ್ತು ಪ್ರತಿವಾದಪತ್ರಗಳಲ್ಲಿ ಪ್ರತಿಪಾದಿಸಿರುವಂತೆ, ಇತರೇ ವಿವಾದಿತ ಅಂಶಗಳಿಗೆ ಸಂಬಂಧಿಸಿದಂತೆ ಸದರಿ ದಾವೆಯ ವಿಚಾರಣೆ ಯೋಗ್ಯವಿದ್ದು, ಅದರಂತೆ ವಿಚಾರಣೆ ನಡೆಯಬೇಕಾಗಿರುತ್ತದೆ. ಮುಂದುವರೆದು, ವಾದಿ ಮತ್ತು ಪ್ರತಿವಾದಿಯರು ಪ್ರತಿಪಾದಿಸಿರುವ ಇತರೇ ಅಂಶಗಳನ್ನು ಸಂಪೂರ್ಣ ವಿಚಾರಣೆಯ ನಂತರ ನ್ಯಾಯೋಲಯವು ಪರಿಗಣಿಸಬಹುದಾದ ಅಂಶವಾಗಿದ್ದು, ಈ ಹಂತದಲ್ಲಿ ಪರಿಗಣಿಸಲು ಸಾಧ್ಯವಿಲ್ಲದಿರುವುದನ್ನು ಗಮನಿಸಬಹುದಾಗಿದೆ. ಆದ್ದರಿಂದ, ನ್ಯಾಯಾಲಯವು ಈ ಮೇಲಿನ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ಅಂಶ 1 ರಿಂದ 3 ನ್ನು ರುಜುವಾತುಪಡಿಸಲು ಯಶಸ್ವಿಯಾಗಿರುತ್ತಾರೆ ಎಂದು ಅಭಿಪ್ರಾಯಿಸಿ, ಸದರಿ ಅಂಶಗಳಿಗೆ **ಸಕಾರಾತ್ಮಕವಾಗಿ** ಉತ್ತರಿಸಲಾಗಿದೆ.

13. **ಅಂಶ 4** ಃ ಈ ಮೇಲಿನ 1 ರಿಂದ 3 ನೇ ಅಂಶಗಳಲ್ಲಿ ಚರ್ಚಿಸಿದ ಕಾರಣಗಳಿಂದಾಗಿ, ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

**ಃಃ ಆದೇಶ ಃಃ**

1 ನೇ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ II, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ XXXIX, ನಿಯಮ 1 ಮತ್ತು 2 ರಡಿಯಲ್ಲಿನ ಅರ್ಜಿಯನ್ನು ಭಾಗಶಃ ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಮುಂದುವರೆದು, ದಾವಾ ಆಸ್ತಿ ಬೆಟ್ಟ ಸ್ಥಳದಲ್ಲಿ ವಿವಾದವಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ರಲ್ಲಿ ನಮೂದಿಸಿರುವ ದಾವಾ ಸ್ವತ್ತಿನ ಸ್ಥಳ ಅಂದರೆ ,ದಾವಾ ಕಬ್ಜಾ

ಹಾತ್ ನಕಾಶೆಯಲ್ಲಿ x ಎಂಬ ಗುರುತಿನಿಂದ ತೋರಿಸಿರುವ ವಿವಾದಿತ ಸ್ಥಳ ಹಾಗೂ ದಾವಾ ಸ್ವತ್ತಿನಲ್ಲಿರುವ ಅಂದರೆ , ದಾವಾ ಕಚ್ಚಾ ಹಾತ್ ನಕಾಶೆಯಲ್ಲಿ ತೋರಿಸಿರುವ ರಸ್ತೆಯ ಜಾಗವನ್ನು ಹೊರತುಪಡಿಸಿ, ಸಾಮೂಹಿಕ ವೈವಾಟಿನ ಜಮೀನುದಾರರು ಓಡಾಡುವ ಹಾಗೂ ಕೃಷಿ ಉತ್ಪನ್ನ ಮತ್ತು ಸಲಕರಣೆಗಳನ್ನು ಸಾಗಿಸುವ ದಾರಿಗೆ ತೊಂದರೆಯಾಗದಂತೆ, ಉಳಿದ ಬೆಟ್ಟದ ಸ್ಥಳದಲ್ಲಿ ಅರಣ್ಯ ಸಸಿಗಳನ್ನು ನೆಡಲು ಯಾವುದೇ ರೀತಿಯ ಅಡ್ಡಿ ಆತಂಕ ಪಡಿಸದಂತೆ ಮುಂದಿನ ಆದೇಶದವರೆಗೂ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ನಿರ್ಬಂಧಕಾಜ್ಞೆ ಆದೇಶವನ್ನು ಆದೇಶಿಸಲಾಗಿದೆ.

ಮುಂದುವರೆದು , ವಾದಿಯರು ಈ ಮೇಲೆ ಆದೇಶಿಸಿದಂತೆ ಸದರಿ ದಾವಾ ಸರ್ಕಾರಿ ಬೆಟ್ಟದ ಸೂಕ್ತ ಜಾಗದಲ್ಲಿ ಇತರೆ ಸಾಮೂಹಿಕ ವೈವಾಟಿನ ಭಾಗಾಯತದಾ -ರರಿಗೆ ತೊಂದರೆಯಾಗದಂತೆ ಅರಣ್ಯ ಸಸಿಗಳನ್ನು ನೆಟ್ಟ ಬಗ್ಗೆ ಪ್ರಮಾಣ ಪತ್ರದೊಂದಿಗೆ ಭಾವಚಿತ್ರಗಳನ್ನು ಹಾಜರುಪಡಿಸಲು ಸೂಚಿಸಲಾಗಿದೆ .

(ಶೀಘ್ರಲಿಪಿಗಾರರಿಗೆ ಉಕ್ತಲೇಖನ ಕೊಟ್ಟು ಗಣಕೀಕೃತಗೊಳಿಸಿರುವುದನ್ನು ಪರಿಷ್ಕರಿಸಿ, **2022 ನೇ ಇಸವಿ ಅಗಸ್ಟ 17 ನೇ** ದಿನಾಂಕದಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)

Sd/-

**ಸಿವಿಲ್ ನಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ಸಿದ್ದಾಪುರ**